PW 2

**ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಿ ಪ್ರಮಾಣೀಕರಿಸಿದ ದಿಃ 02.09.2024**

**ಪಾಟೀ ಸವಾಲುಃ ಶ್ರೀ ಡಿ ಡಿ ಸಿ ವಕೀಲರಿಂದ**

ಈ ದಿನ ನಾನು ನ್ಯಾಯಾಲಯಕ್ಕೆ ಪ್ರಾಸಾ **1** ರವರೊಂದಿಗೆ ಬಂದಿರುತ್ತೇನೆ ಎಂದರೆ ಸರಿಯಲ್ಲ. ಈಗಲೂ ಸಹ ಪ್ರಾಸಾ **1** ರವರು ನ್ಯಾಯಾಲಯದ ಆವರಣದಲ್ಲಿ ಇದ್ದಾರೆ ಎಂದರೆ ಸರಿ . ಪ್ರಾಸಾ **1** ನನಗೆ **5-6** ವರುಷಗಳಿಂದ ಪರಿಚಯ. ನಾನು ಪ್ರಾಸಾ **1** ರವರ ಬಳಿ ಕೂಲಿ ಕೆಲಸಕ್ಕೆ ಹೋಗುವುದಿಲ್ಲ. ಮುಂದಿನ ವಾರ ಆರೋಪಿಯ ಮಗನ ನಿಶ್ಚಿತಾರ್ಥ ಸಮಯದಲ್ಲಿ ಪ್ರಾಸಾ **1** ರವರೊಂದಿಗೆ ಸೇರಿಕೊಂಡು ಆರೋಪಿಯ ವಿರುದ್ಧ ಅಟ್ರಾಸಿಟಿ ಕೇಸ್ ದಾಖಲಿಸುವುದಾಗಿ ಊರಿನಲ್ಲಿ ಹೇಳಿಕೊಂಡು ತಿರುಗುತ್ತಿದ್ದೇನೆ ಎಂದರೆ ಸರಿಯಲ್ಲ.

ದಿ **24-07-2020** ರಂದು ನಾನು ಕೂಲಿ ಕೆಲಸಕ್ಕೆ ಹೋಗಿರುವುದಿಲ್ಲ. ನಾನು ಅಂಗಡಿಗೆ ಹೋದ ಸಮಯದಲ್ಲಿ ಚಾಸಾ **6** ರವರು ಅಂಗಡಿಯಲ್ಲಿ ಇಲ್ಲದ ಕಾರಣ ನಾನು ಅವರಿಗಾಗಿ ಕಾಯುತ್ತಾ ನಿಂತಿದ್ದೆ . ನಾನು ಅಂಗಡಿಗೆ ಹೋದಾಗ ಅಂಗಡಿ ತೆರೆದಿತ್ತು . **11-30** ಗಂಟೆಯ ಸಮಯಕ್ಕೆ ಚಾಸಾ **1** ಮತ್ತು **4** ರವರು **10** ಅಡಿ ದೂರದಲ್ಲಿ ಬರುತ್ತಿದ್ದರು . ಆ ಸಮಯದಲ್ಲಿ ಪ್ರಾಸಾ **1** ರವರ ಕೈಯಲ್ಲಿ ದೊಣ್ಣೆ ಇರಲಿಲ್ಲ. ಸದರಿ ದಿನ ಪ್ರಾಸಾ **1** ಹಾಗೂ ಚಾಸಾ **4** ರವರು ಪ್ಯಾಂಟ್ ಶರ್ಟ್ ಧರಿಸಿದ್ದರು . ಆ ಸಮಯದಲ್ಲಿ ನಾನು ಚಾಸಾ **6** ರವರ ಅಂಗಡಿಯ ಮುಂಭಾಗ ಇದ್ದೆ . ಆ ಸಮಯದಲ್ಲಿ ಚಾಸಾ **1** ಮತ್ತು **4** ರವರು ಕೋಣನೂರು ರಸ್ತೆ ಕಡೆಯಿಂದ ಚಾಸಾ **6** ರವರ ಅಂಗಡಿಯ ಕಡೆಗೆ ಬರುತ್ತಿದ್ದರು . ಆ ಸಮಯದಲ್ಲಿ ಆರೋಪಿ ಚಾಸಾ **6** ರವರ ಅಂಗಡಿಯ ಬಳಿ ನನ್ನಿಂದ **5** ಅಡಿ ದೂರದಲ್ಲಿ ಇದ್ದರು . ಆ

ಸಮಯದಲ್ಲಿ ಆರೋಪಿ ಅಂಗಡಿಯ ಬಳಿ ಪಕ್ಕದಲ್ಲಿದ್ದರು. ನಾನು ನೋಡಿದಾಗ ಆರೋಪಿ ಅಂಗಡಿಯ ಬಳಿ ನಿಂತಿದ್ದರು. ಅಲ್ಲಿ ಆರೋಪಿಯ ಕಾರು ಇದ್ದ ಬಗ್ಗೆ ನನಗೆ ಗೊತ್ತಿಲ್ಲ. ಚಾಸಾ 6 ರವರ ಅಂಗಡಿಯಲ್ಲಿ ಸಿ ಸಿ ಟಿ ವಿ ಕ್ಯಾಮರ ಇದೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿ ಮತ್ತು ಚಾಸಾ 1 ಮತ್ತು 4 ರವರ ನಡುವೆ ಗಲಾಟೆ ಆಗುವ ಸಮಯದಲ್ಲಿ ನಾನು ಹೋಗಿ ಗಲಾಟೆ ಬಿಡಿಸಿರುತ್ತೇನೆ. ಅಲ್ಲಿ ಅಂದಾಜು 15 ನಿಮಿಷಗಳ ಕಾಲ ಗಲಾಟೆಯಾಗಿದೆ . ಆ ಸಮಯದಲ್ಲಿ ಕೃತ್ಯ ಸ್ಥಳದ ಒಂದು ಬೇಕರಿ ತೆರೆದಿತ್ತು .

ಕೃತ್ಯ ಸ್ಥಳದ ಅಕ್ಕಪಕ್ಕ ಸಾಕಷ್ಟು ಅಂಗಡಿ ಮಳಿಗೆಗಳು ಇದೆ ಎಂದರೆ ಸರಿ . ಗಲಾಟೆಯಾಗುವಾಗ ನಾನು , ಚಾಸಾ 3 ಮತ್ತು ಚಾಸಾ 5 ರವರು ಹಾಜರಿದ್ದೇವು . ನಮ್ಮನ್ನು ಹೊರತು ಪಡಿಸಿ ಇನ್ನು 2 ರಿಂದ 3 ಜನ ಸೇರಿದ್ದು ಅವರುಗಳ ಹೆಸರು ನನಗೆ ಗೊತ್ತಿಲ್ಲ. ಗಲಾಟೆಯ ನಂತರ ಆರೋಪಿ ಎಲ್ಲಿಗೆ ಯಾವುದರಲ್ಲಿ ಹೋದರು ಎಂದು ನಾನು ನೋಡಿರುವುದಿಲ್ಲ. ಆರೋಪಿಯಿಂದ 5 ಅಡಿ ದೂರದಲ್ಲಿ ನಾನು ನಿಂತಿದ್ದು ಗಲಾಟೆಯ ಸಮಯದಲ್ಲಿ ಅವರುಗಳ ಮಧ್ಯೆ ಆದ ಸಂಭಾಷಣೆಯನ್ನು ನಾನು ಕೇಳಿಸಿಕೊಂಡಿರುವುದಿಲ್ಲ.

ಹಲ್ಲೆಯ ಸಮಯದಲ್ಲಿ ಆರೋಪಿ ಪ್ರಾಸಾ 1 ರವರ ಎಡ ಭಾಗದ ಭುಜಕ್ಕೆ ಕಲ್ಲಿನಿಂದ ಹೊಡೆದಿರುತ್ತಾರೆ . ಗಲಾಟೆಯಲ್ಲಿ ಪ್ರಾಸಾ 1 ರವರು ಪ್ರಜ್ಞೆ ತಪ್ಪಿದ್ದು ನಾವು ಅವರಿಗೆ ನೀರು ಕುಡಿಸಿ ಉಪಚರಿಸಿ ಯಾವುದೋ ಬರುತ್ತಿದ್ದ ಕಾರಿನಲ್ಲಿ ಚಿಕಿತ್ಸೆಗಾಗಿ ಕಳುಹಿಸಿಕೊಟ್ಟಿರುತ್ತೇವೆ . ಪ್ರಾಸಾ 1 ರವರನ್ನು ಕಾರಿನಲ್ಲಿ ಚಿಕಿತ್ಸೆಗಾಗಿ ಕಳುಹಿಸಿಕೊಡುವಾಗಲು ಅವರಿಗೆ ಪ್ರಜ್ಞೆ ಇರಲಿಲ್ಲ. ಪ್ರಾಸಾ 1 ರವರನ್ನು ಕಾರಿನಲ್ಲಿ ಚಿಕಿತ್ಸೆಗೆ ಕಳುಹಿಸಿಕೊಡುವ ಸಮಯದಲ್ಲಿ ಚಾಸಾ 6 ರವರು ಬಂದಿರಲಿಲ್ಲ. ಪ್ರಾಸಾ 1

ರವರನ್ನು ಚಿಕಿತ್ಸೆಗಾಗಿ ಯಾರು ಕರೆದುಕೊಂಡು ಹೋದರು ಎಂದು ನನಗೆ ಗೊತ್ತಿಲ್ಲ. ನಂತರ ನಾನು ಪ್ರಾಸಾ **1** ರವರನ್ನು **15** ದಿನಗಳ ನಂತರ ನೋಡಿರುತ್ತೇನೆ . ಈ ಮಧ್ಯೆದಲ್ಲಿ ನಾನು ಪ್ರಾಸಾ **1** ರವರನ್ನು ನೋಡಲು ಅವರ ಮನೆಗೆ ಹೋಗಿರುವುದಿಲ್ಲ.

ಪೋಲಿಸರು ನನ್ನನ್ನು ವಿಚಾರಣೆಗೆ ಹಾಜರಾಗಲು ದಿ **28-07-2020** ರಂದು ಮಧ್ಯಾಹ್ನ **1** ಗಂಟೆಯ ಸಮಯದಲ್ಲಿ ಕರೆದಿರುತ್ತಾರೆ . ಆ ಸಮಯದಲ್ಲಿ ನಾನು ನಮ್ಮ ಮನೆಯಲ್ಲಿದ್ದೆ. ಮುರೂರು ಗ್ರಾಮದಿಂದ ಹೆಬ್ಬಾಲೆ ಸುಮಾರು **2.5** ಕಿ ಮೀ ದೂರದಲ್ಲಿರುತ್ತದೆ . ಪೋಲಿಸರು ನನ್ನನ್ನು ಹೆಬ್ಬಾಲೆಗೆ ಬರುವಂತೆ ತಿಳಿಸಿರುತ್ತಾರೆ. ನಾನು ಹೆಬ್ಬಾಲೆ ಗ್ರಾಮ ತಲುಪುವ ವೇಳೆಗೆ ಮಧ್ಯಾಹ್ನ **1-30** ರಿಂದ **2-00** ಗಂಟೆಯಾಗಿರುತ್ತದೆ. ಆ ಸಮಯದಲ್ಲಿ ಕೃತ್ಯ ಸ್ಥಳದಲ್ಲಿ ಪ್ರಾಸಾ **1** , ಚಾಸಾ **3** , ನಾನು ಹಾಗೂ ಚಾಸಾ **5** ರವರು ಹಾಜರಿದ್ದೇವು . ನಾನು ಹೆಬ್ಬಾಲೆ ತಲುಪುವ ವೇಳೆಗೆ ಇಬ್ಬರು ಪೋಲಿಸರು ಇದ್ದರು . ಪೋಲಿಸರು ನನಗೆ ಸ್ಥಳಕ್ಕೆ ಬರಲು ನೋಟಿಸು ನೀಡಿರುವುದಿಲ್ಲ. ನಾವು ಸ್ಥಳಕ್ಕೆ ಹೋದಾಗ ಆ ದಿನ ಮಂಜಣ್ಣ ಎಂಬುವವರ ಅಂಗಡಿ ತೆರೆದಿತ್ತು . ಆ ಸಮಯದಲ್ಲಿ ಸಾರ್ವಜನಿಕರು ಇರಲಿಲ್ಲ. ಮಂಜಣ್ಣನವರ ಅಂಗಡಿ ಗೊಬ್ಬರದ ಅಂಗಡಿಯಾಗಿರುತ್ತದೆ . ನಿಪಿ **3** ರಲ್ಲಿ ಕಾಣಿಸುವ ಅಂಗಡಿ ಚಾಸಾ **6** ರವರ ಅಂಗಡಿಯಾಗಿದ್ದು ಪಕ್ಕದಲ್ಲಿ ಬೇಕರಿ ಇದ್ದು ಎರಡೂ ಅಂಗಡಿಗಳು ತೆರೆದಿದೆ . ಆ ಸಮಯದಲ್ಲಿ ಚಾಸಾ **6** ರವರಾಗಲಿ ಅಥವಾ ಬೇಕರಿಯವರಾಗಲಿ ಯಾರು ಇರಲಿಲ್ಲ. ಸ್ಥಳದಲ್ಲಿ ಎಷ್ಟು ಭಾವ ಚಿತ್ರಗಳು ತೆಗೆಯಲಾಗಿದೆ ಎಂದು ನನಗೆ ಗೊತ್ತಿಲ್ಲ. ನಿಪಿ **3** ರಲ್ಲಿ ಚಾಸಾ **5** ರವರು ಕಾಣಿಸುವುದಿಲ್ಲ. ಮಹಜರಿನ ಸಮಯದಲ್ಲಿ ಪೋಲಿಸರು ಒಂದು

ಕಲ್ಲನ್ನು ಅಮಾನತುಪಡಿಸಿಕೊಂಡಿದ್ದು ಅದು ನಿಪಿ **3** ರಲ್ಲಿ ಕಾಣಿಸುವುದಿಲ್ಲ. ಮಹಜರಿನ ಸಮಯದಲ್ಲಿ ಕಲ್ಲು ಮೋರಿಯ ಪಕ್ಕದಲ್ಲಿ ಇತ್ತು .

ನಿಪಿ **3** ರಲ್ಲಿ ಪ್ರಾಸಾ **1** ರವರಿಗೆ ಬ್ಯಾಂಡೇಜ್ ಹಾಕಿರುವ ಬಗ್ಗೆ ಅಥವಾ ಗಾಯವಾಗಿರುವ ಬಗ್ಗೆ ಕಾಣುತ್ತಿದೆಯೇ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುವರು. ಮಹಜರನ್ನು ಮಧ್ಯಾಹ್ನ **1-30** ರಿಂದ **2-00** ಗಂಟೆಯ ಸಮಯದವರೆಗೆ ಮಾಡಲಾಗಿದೆ . ಮಹಜರಿನಲ್ಲಿ ಬರೆದಿರುವ ವಿಚಾರಗಳ ಬಗ್ಗೆ ನನಗೆ ಮಾಹಿತಿ ಇಲ್ಲ. ಪೋಲಿಸರು ನನ್ನಿಂದ ಸ್ಥಳದಲ್ಲಿ ಒಂದು ಸಹಿಯನ್ನು ಪಡೆದಿರುತ್ತಾರೆ . ನಾನು ಅದೇ ದಿನ ಮಧ್ಯಾಹ್ನ **3** ಗಂಟೆಯ ಸಮಯಕ್ಕೆ ಪೋಲಿಸ್ ಠಾಣೆಗೆ ಒಬ್ಬನೇ ಹೋಗಿರುತ್ತೇನೆ . ಪೋಲಿಸ್ ಠಾಣೆಯಲ್ಲಿ ನನ್ನ ಸಹಿ ಪಡೆದಿರುವುದಿಲ್ಲ. ಪೋಲಿಸ್ ಠಾಣೆಯಲ್ಲಿ ನನ್ನ ಹೇಳಿಕೆ ಪಡೆದಿರುವುದಿಲ್ಲ.

ದಿ **24-07-2020** ರಂದು ನಾನು ಚಾಸಾ **6** ರವರ ಅಂಗಡಿಯ ಬಳಿ ಹೋಗಿರಲಿಲ್ಲ ಆ ದಿನ ನಾನು ಇರಲಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಚಾಸಾ **6** ರವರ ಅಂಗಡಿಯ ಮುಂಭಾಗ ಯಾವುದೇ ಗಲಾಟೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಬೇಕರಿಯಿಂದ **15** ಅಡಿ ದೂರದಲ್ಲಿ ಇರುವ ಒಂದು ಖಾಲಿ ಜಾಗ ಯಾರದು ಎಂದು ನನಗೆ ಗೊತ್ತಿಲ್ಲ. ಸದರಿ ಖಾಲಿ ಜಾಗದ ಬಳಿ ಆರೋಪಿ ಕಾರಿನಿಂದ ಇಳಿದು ಪೋನ್ ನಲ್ಲಿ ಸಂಭಾಷಣೆ ಮಾಡುತ್ತಿರುವಾಗ **1** ನೇ ಆರೋಪಿ ಟೀ ಶರ್ಟ್‌ಹಾಗೂ ಪಂಚೆ ಧರಿಸಿ **2** ನೇ ಆರೋಪಿಯೊಂದಿಗೆ ದೊಣ್ಣೆ ಹಿಡಿದು ಬಂದು ಆರೋಪಿಗೆ ಹಲ್ಲೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ತದನಂತರ ಅಲ್ಲಿದ್ದ **10-15** ಜನ ಗಲಾಟೆಯನ್ನು ತೆಡೆದಿದ್ದು ಆರೋಪಿ ಸುಧಾರಿಸಿ ಕೊಂಡು ಕುಶಾಲನಗರ ಕಡೆಗೆ ಹೋದರು ಎಂದರೆ ನನಗೆ ಗೊತ್ತಿಲ್ಲ. ಪ್ರಾಸಾ **1** ರವರು ಆರೋಪಿಗೆ **11-13**

PW 2

ನಿಮಿಷದಿಂದ **11-23** ನಿಮಿಷದ ವರೆಗೆ ಹಲ್ಲೆ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಈ ಎಲ್ಲಾ ದೃಶ್ಯಗಳು ಚಾಸಾ **6** ರವರ ಅಂಗಡಿಯಲ್ಲಿರುವ ಸಿ ಸಿ ಟಿ ವಿ ದೃಶ್ಯಾವಳಿಯಲ್ಲಿ ರಕಾರ್ಡ್ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ನಾನು ಹೇಳಿದಂತೆ ಆರೋಪಿ ಪ್ರಾಸಾ **1** ರವರಿಗೆ ಕಲ್ಲಿನಿಂದ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಪ್ರಾಸಾ **1** ರವರ ಬಳಿ ಕೂಲಿಗೆ ಹೋಗುವ ಕಾರಣ ಅವರು ಹೇಳಿಕೊಟ್ಟಂತೆ ಆರೋಪಿಯ ವಿರುದ್ದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೂ ಈ ಪ್ರಕರಣಕ್ಕೂ ಹಾಗೂ ಎಂ ಒ **1** ಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆಸರಿಯಲ್ಲ. ನನ್ನ ಸಮಕ್ಷಮ ಯಾವುದೇ ಮಹಜರ್ ಕ್ರಮ ಜರುಗಿಸಿಲ್ಲ ಪ್ರಾಸಾ **1** ರವರೊಂದಿಗೆ ಹೋಗಿ ಠಾಣೆಯಲ್ಲಿ ಮಹಜರಿಗೆ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

ಸಹಿ/-

ಪ್ರ ದ ನ್ಯಾ ದಂ, ಕುಶಾಲನಗರ

CC No. 741/20

PW 2

CC No. 741/20

PW 2